**ಪಿ. ಡಬ್ಲ್ಯೂಃ 1**

**(ಇಂದು ದಿಃ27/06/2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಆರ್ ಜಿ ಎನ್ ವಕೀಲರಿಂದ,**

ನಾನು ಈಗ ಕೋಣಾರ ಗ್ರಾಮದಲ್ಲಿರುವ ನನ್ನ ಮನೆಯಲ್ಲಿ ಉಳಿದುಕೊಂಡಿರುತ್ತೇನೆ. ನಾನು ವಾಸವಾಗಿರುವ ಮನೆಗೂ ದಾವಾ ಆಸ್ತಿಯಲ್ಲಿ ಕಾಣಿಸಿರುವ ಮನೆಯೂ ಅಕ್ಕಪಕ್ಕದಲ್ಲಿವೆ. ದಾವಾ ಆಸ್ತಿ ಸರ್ವೆ ನಂ. 106 ಇರುತ್ತದೆ. ದಾವಾ ಆಸ್ತಿಯಲ್ಲಿ ಇರುವ ಮನೆ ನಂ .130 ಇರುತ್ತದೆ. ದಾವಾ ಆಸ್ತಿಯಲ್ಲಿ ರುವ ಮನೆಯಲ್ಲಿ ಪ್ರತಿವಾದಿಯರು ಉಳಿದುಕೊಂಡಿರುತ್ತಾರೆ ಎಂದರೆ ನಿಜ. ದಾವಾ ಆಸ್ತಿಯನ್ನು ಪ್ರತಿವಾದಿಯರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಸದ್ರಿಯವರಿಗೆ ದಾವಾ ಆಸ್ತಿಯಲ್ಲಿ ಉಳಿದುಕೊಳ್ಳಲು 10 ವರ್ಷಗಳ ಹಿಂದೆ ಹೇಳಿರುತ್ತೇವೆ. ದಿನಾಂಕ ನನಗೆ ನೆನಪಿರುವುದಿಲ್ಲ. ಸದ್ರಿಯದಕ್ಕೆ ಸಂಬಂಧಿಸಿ ಯಾವದೇ ಕಾಗದ ಪತ್ರ ಮಾಡಿಕೊಂಡಿರುವುದಿಲ್ಲ. ಪ್ರತಿವಾದಿಯರು ದಾವಾ ಆಸ್ತಿಯ ಮನೆಯಲ್ಲಿ ಉಳಿದಿದ್ದಕ್ಕೆ ಸುಮಾರು 4 ಬಾರಿ 500 ರೂಪಾಯಿಯಂತೆ ಹಣ ಪಾವತಿಸಿರುತ್ತಾರೆ. ಸದ್ರಿ ಸಂಗತಿಯನ್ನು ನಾನು ದಾವೆಯನ್ನು ದಾಖಲಿಸುವ ಸಮಯದಲ್ಲಿ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನೆ. ದಾಖಲೆ ಪತ್ರವನ್ನು ಪ್ರತಿವಾದಿಯರು ಪರಿಚಯ ಇದ್ದುದರಿಂದ ಮಾಡಿಕೊಂಡಿರುವುದಿಲ್ಲ. ನನಗೆ ಹೃದಯ ಚಿಕಿತ್ಸೆ ಆಗಿರುತ್ತದೆ. ದಾವಾ ಆಸ್ತಿಯು 15 ಗುಂಟೆ ಇರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ಶಾಲೆ ಇದೆ. ಪಶ್ಚಿಮಕ್ಕೆ ವೆಂಕಟರಮಣ ಹೆಬ್ಬಾರರವರ ಆಸ್ತಿ ಇದೆ. ದಕ್ಷಿಣಕ್ಕೆ ರಾಮಕೃಷ್ಣ ಹೆಬ್ಬಾರರವರ ಮನೆ ಇದೆ. ಉತ್ತರಕ್ಕೆ ಗುಡ್ಡ ಇದೆ. ಭಟ್ಕಳ ನ್ಯಾಯಾಲಯದಲ್ಲಿ ಪ್ರಸ್ತುತ ದಾವೆಯನ್ನು ಬಿಟ್ಟು ಬೇರೆ ಯಾವ ಕೇಸುಗಳು ಇರುವುದಿಲ್ಲ. ನನ್ನ ಯಜಮಾನರ ಹೆಸರಿನಲ್ಲಿ ಮತ್ತು ನನ್ನ ತಾಯಿಯಿವರ ಹೆಸರಿನಲ್ಲಿ ಯಾವುದೇ ಕೇಸುಗಳು ಇರುವುದಿಲ್ಲ. ಪ್ರತಿವಾದಿಯರಿಗೆ ಅಂದಾಜು 2010 ನೇ ಇಸವಿಯಲ್ಲಿ ಉಳಿದುಕೊಳ್ಳಲು ಕೊಟ್ಟಿರುತ್ತೇವೆ. ನನಗೆ ಇಂಗ್ಲೀಷ ಓದಲು ಬರುವುದಿಲ್ಲ. ದಾವಾ ಆಸ್ತಿಯು ನಮಗೆ ಯಾವ ಇಸವಿಯಲ್ಲಿ ಮಂಜೂರಾಗಿರುತ್ತದೆಂದು ನನಗೆ ನೆನಪಿರುವುದಿಲ್ಲ. ಸರ್ವೆ ನಂ. 106 ರಲ್ಲಿ ಒಟ್ಟು 22 ಗುಂಟೆ ಜಾಗ ಇರುತ್ತದೆ. ದಾವೆಯನ್ನು ದಾಖಲಿಸುವ ಮುಂಚೆ ಪ್ರತಿವಾದಿಯರಿಗೆ ನಮ್ಮ ಮನೆ ಬಿಟ್ಟು ಕೊಡು ಎಂದು ಸಾಕಷ್ಟು ಸಲ ಕೇಳಿರುತ್ತೇನೆ. ಸದ್ರಿಯದನ್ನು 4-5 ವರ್ಷಗಳ ಹಿಂದೆ

ಕೇಳಿರುತ್ತೇನೆ. ಆ ಸಮಯದಲ್ಲಿ ಸದ್ರಿಯವರಿಗೆ ಬಾಯಿ ಮಾತಿನಿಂದ ಬಿಟ್ಟು ಕೊಡಲು ಹೇಳಿರುತ್ತೇನೆ. ದಾವೆ ದಾಖಲಿಸುವ ಪೂರ್ವದಲ್ಲಿ ಮನೆ ಬಿಟ್ಟು ಕೊಡಲೆಂದು ಕಳುಹಿಸಿದ ನೊಟೀಸಿಗೆ ಪ್ರತಿವಾದಿಯರು ಪ್ರತ್ಯುತ್ತರ ನೀಡಿರುತ್ತಾರೆ. ಸದ್ರಿಯವರು ತಮ್ಮ ಪ್ರತ್ಯುತ್ತರದಲ್ಲಿ ಸದ್ರಿ ಆಸ್ತಿ ನಾವು ಖರೀದಿಸಿರುತ್ತೇವೆಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಯನ್ನು ಈ ಹಿಂದೆ ನಾನು ಬೇರೆಯವರಿಗೆ ಖರೀದಿ ಕೊಟ್ಟಿದ್ದೇನು ಎಂದರೆ ಸರಿಯಲ್ಲ. ಸದರಿಯದನ್ನು ಖರೀದಿ ಕೊಟ್ಟ ನಂತರ ಹಣವನ್ನು ಸರಿದೂಗಿಸಲು ಆಗದಿದ್ದಕ್ಕೆ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಾನೇ ಸಹಿ ಹಾಕಿರುತ್ತೇನೆ. ಸಾಕ್ಷಿಯು ಪ್ರಮಾಣಪತ್ರವನ್ನು ನೋಡಿ ಅದರಲ್ಲಿರುವ ಸಹಿಯನ್ನು ಗುರುತಿಸಿ ಅದು ನನ್ನದೇ ಸಹಿ ಅಥವಾ ಅಲ್ಲವೆಂದು ಅನುಮಾನ ಬರುತ್ತಿದೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಪ್ರಮಾಣ ಪತ್ರದಲ್ಲಿನ 2 ನೇ ಪುಟದಲ್ಲಿರುವ ಸಹಿ ನೋಡಿ ಅದೂ ಸಹ ನನ್ನದೂ ಅಥವಾ ಅಲ್ಲವೆಂದು ಅನುಮಾನ ಬರುತ್ತಿದೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಪ್ರಮಾಣ ಪತ್ರದಲ್ಲಿ ಹಾಕಿದ 3 ಸಹಿಗಳು ನಾನೇ ಮಾಡಿರುತ್ತೇನೆ ಎಂದು ನುಡಿದಿರುತ್ತೇನೆ. ಸಾಕ್ಷಿಯು ಕರಾರು ಪತ್ರದಲ್ಲಿ ಮಾಡಿರುವ ಸಹಿಗಳು ನನ್ನ ಸಹಿಗಳು ಅಲ್ಲವೆಂದು ನುಡಿದಿರುತ್ತಾರೆ.

ದಾವಾ ಆಸ್ತಿಯನ್ನು ಪ್ರತಿವಾದಿಯರಿಗೆ ಮಾರಾಟ ಮಾಡಿ ಈಗ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯದರನ್ನು ಪ್ರತಿವಾದಿಯರಿಗೆ ಒಟ್ಟು ಐದು ಲಕ್ಷ ಐವತ್ತು ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ . ಸದರಿಯದರಲ್ಲಿ ಐದು ಲಕ್ಷ ಹತ್ತು ಸಾವಿರ ರೂಪಾಯಿ ಹಣ ನಗದಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಅದಾದ ನಂತರ ಪ್ರತಿವಾದಿಯವರಿಂದ ಮೂವತ್ತು ಸಾವಿರ ರೂಪಾಯಿ ನಗದು ಹಣವನ್ನು ಪಡೆದಿರುತ್ತೇನೆ ಎಂದರೆಸಂರಿಲಲ. ಪ್ರತಿವಾದಿಯರು ಈಗ ಕೇವಲ 10000 ರೂಪಾಯಿಗಳನ್ನು ಮಾತ್ರ ಕೊಡುವುದು ಬಾಕಿ ಇರುತ್ತದೆಎಂದರೆ ಸರಿಯಲ್ಲ. ಪ್ರತಿವಾದಿಯರು ನನಗೆ ಸಾಕಷ್ಟು ಬಾರಿ ಕ್ರಯಪತ್ರ ಮಾಡಿಕೊಡಲು ಕೇಳಿದ್ದರೂ ಸಹ ನಾನು ಇಂದು ನಾಳೆ ಎಂದುಕಾಲಹರಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನತಾಯಿಯ ಆಸ್ತಿಯನ್ನು ಸಹ ಬೇರೆಯವರಿಗೆ ಮಾರಾಟ ಮಾಡಿ ಅದಕ್ಕೆ ಸಂಬಂಧಿಸಿ ದಾಖಲಿಸಿದ ದಾವೆಯನ್ನು ಇದೇ ನ್ಯಾಯಾಲಯದಲ್ಲಿ ಎದುರಿಸುತ್ತಿದ್ದೇನೆ ಎಂದರೆ ಎಂದರೆ ಸರಿಯಲ್ಲ. ದಾವೆ ದಾಖಲಾಗಿದ್ದರೂ ಸಹ ನ್ಯಾಯಾಲಯದ ಮುಂದೆ ಇಲ್ಲವೆಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಸಾಕ್ಷಿಯ ಮುಂದುವರೆದು, ನಾನು ನನ್ನ ತಾಯಿಯ ಅಸ್ತಿ

ಮಾರಾಟ ಮಾಡಿರುವುದಿಲ್ಲ. ಅವರಿಗೆ ಅನಾರೋಗ್ಯದ ಸಮಯದಲ್ಲಿ ಅವರು ನಮ್ಮ ಅತ್ತೆಯ ಮಗನ ಬಳಿಯಿಂದ ಸ್ವಲ್ಪ ಹಣ ಪಡೆದಿದ್ದರೆಂದು ನುಡಿದಿರುತ್ತಾರೆ. ಮನೆಯ ತೆರಿಗೆಯನ್ನು ಸ್ವಲ್ಪ ನಾವು ಪಾವತಿಸಿದ್ದು ಕೆಲವು ಬಾರಿ ಪ್ರತಿವಾದಿಯರು ಪಾವತಿಸಿರುತ್ತಾರೆ. ದಾವಾ ಆಸ್ತಿಯನ್ನು ಪ್ರತಿವಾದಿಯರಿಗೆ ಮಾರಾಟ ಮಾಡಿದುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸದ್ರಿಯವರ ವಿರುದ್ಧ ಪ್ರಸ್ತುತ ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದ್ರಿ ದಾವೆಯನ್ನು ದಾಖಲಿಸುದರಿಂದ 2 ನೇ ಪ್ರತಿವಾದಿಯು ಕಾಯಿಲೆ ಬಿದ್ದಿರುತ್ತಾಳೆ ಎಂದರೆ ಸರಿಯಲ್ಲ. ನಾನು ದಿಃ 16.08.2012 ರಂದು ಮಾರಾಟದ ಕರಾರು ಪತ್ರವನ್ನು ಪ್ರತಿವಾದಿಯವರೊಂದಿಗೆ ಮಾಡಿಕೊಂಡಿರುತ್ತೇನೆ ಎಂದರೆ ಎಂದರೆ ಸರಿಯಲ್ಲ. ಕರಾರು ಪತ್ರವನ್ನು ಮಾಡಿಕೊಳ್ಳುವ ಪೂರ್ವದಲ್ಲಿ ಪ್ರತಿವಾದಿಯರ ಬಳಿಯಿಂದ 500 ರೂ.ಯ ಸ್ಟಾಂಪ್ ಪೇಪರನ್ನು ತರಿಸಿರುತ್ತೇನೆ ಎಂದರೆ ಸರಿಯಲಲ. ಶ್ರೀದರ ನಾರಾಯಣ ಶೆಟ್ಟಿಯವರು ನನ್ನ ಗಂಡ. ಈರಪ್ಪ ನಾರಾಯಣ ನಾಯ್ಕ ಯಾರು ಎಂದುನನಗೆ ಗೊತ್ತಿರುವುದಿಲ್ಲ. ಕರಾರು ಪತ್ರವನ್ನು ಶ್ರೀದರ ನಾರಾಯಣ ಶೆಟ್ಟಿ ಮತ್ತು ಈರಪ್ಪ ನಾರಾಯಣ ನಾಯ್ಕರವರ ಸಮಕ್ಷಮ ಬರೆದುಕೊಟ್ಟಿದ್ದರು ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯದನ್ನು ಗೊಮ್ಸ ವಕೀಲರ ಕಚೇರಿಯಲ್ಲಿ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿರುವ ಮನೆಯ ವಿದ್ಯುತ್ ಬಿಲ್ಲನ್ನು ಪ್ರತಿವಾದಿಯರೇ ಕಟ್ಟುತ್ತಿದ್ದಾರೆ. ಅದಕ್ಕಿಂತ ಮುಂಚೆ ಸದಿರಯದರ ವಿದ್ಯುತ್ ಬಿಲ್ಲನ್ನು ನಾನೇ ಪಾವತಿಸಿದ್ದೇನು. ನಾನು ಮತ್ತು ನನ್ನ ಗಂಡ ಸೇರಿ ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಪ್ರಸ್ತುತ ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದ್ರಿ ಕರಾರು ಪತ್ರ ವನ್ನು ಬರೆದು ಕೊಟ್ಟಿದ್ದರಿಂದ ಪ್ರತಿವಾದಿಯರಿಗೆ ಖರೀದಿ ಪತ್ರ ಮಾಡಿಕೊಡಲು ಬಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿರುವ ಮನೆ ಮತ್ತು ನಾನು ವಾಸವಾಗಿರುವ ಮನೆ ಅಕ್ಕಪಕ್ಕದಲ್ಲಿ ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರಧಾನ ಸಿವಿಲ್ ಜಡ್ಜ, ಭಟ್ಕಳ**